ಕಿರುಸುದ್ದಿ

ಗಾಳಿ ಮಳೆಗೆ ಧರೆಗುರುಳಿದ ಮರ: ಸಂಚಾರಕ್ಕೆ ಅಡಚಣೆ

◆ **ಶಿವಮೊಗ್ಗ :** ತಾಲೂಕಿನ ಚೋರಡಿ ಬಳಿ ಭಾನುವಾರ ಮಧ್ಯಾಹ್ನ ಬಂದ ಮಳೆ, ಗಾಳಿಯಿಂದಾಗಿ ರಸ್ತೆ ಮೇಲೆ ಮರ ಬಿದ್ದ ಪರಿಣಾಮ ಶಿವಮೊಗ್ಗ-ಸಾಗರ ನಡುವೆ ಒಂದು ತಾಸಿಗೂ ಹೆಚ್ಚು ಕಾಲ ವಾಹನ ಸಂಚಾರಕ್ಕೆ ಅಡಚಣೆ ಯಾಗಿತ್ತು. ಏಕಾಏಕಿ ಗಾಳಿ ಬೀಸಿದ್ದರಿಂದಾಗಿ ಮರ ಬುಡಸಮೇತ ರಸ್ತೆ ಮೇಲೆ ಬಿದ್ದಿದ್ದರಿಂದಾಗಿ ವಾಹನ ಸಂಚಾರ ಸ್ಥಗಿತ ಗೊಂಡಿತ್ತು. ಸ್ಥಳೀಯ ನೆರವಿನೊಂದಿಗೆ ಮರ ಕತ್ತರಿಸಿ ತೆರವು ಮಾಡಿದ ಬಳಿಕ ಸಂಚಾರ ಸುಗಮ ಗೊಂಡಿತು. ಎರಡೂ ಬದಿಯಲ್ಲಿ ವಾಹನಗಳು ನಿಲ್ಲುವಂತಾಗಿತ್ತು.

ಗುಡುಗು ಸಹಿತ ಧಾರಾಕಾರ ಮಳೆ

◆ **ದಾವಣಗೆರೆ:** ಜಿಲ್ಲೆಯಲ್ಲಿ ಭಾನುವಾರ ಸಂಜೆ ಬಿರುಗಾಳಿ, ಗುಡುಗು ಸಹಿತ ಪೂರ್ವ ಮುಂಗಾರು ಮಳೆ ಧಾರಾಕಾರವಾಗಿ ಸುರಿಯಿತು.

ಬೇಸಿಗೆಯ ಸೆಖೆಯಿಂದ ಬೆಳಗ್ಗೆಯಿಂದಲೂ ಕಾದ ಕಾವಲಿಯಂತಾಗಿದ್ದ ವಾತಾವರಣವು ಸಂಜೆಯ ಮಳೆಯಿಂದ ತಂಪಾಯಿತು. ಬಿಸಿಲಿನಿಂದ ಬೆಂಗಾಡಾಗಿದ್ದ ದಾವಣಗೆರೆ ನಗರಕ್ಕೆ ವರ್ಷದ ಮೊದಲ ಮಳೆ ಕೂಡ ಹನಿಯಿತು. ಮೋಡ ಕವಿದ ವಾತಾವರಣ, ತಂಗಾಳಿ ಜಿಲ್ಲೆಯ ಜನರಲ್ಲಿ ಸಂತಸ ಮೂಡಿಸಿತು. ಹಲವು ದಿನಗಳಿಂದ 38ರಿಂದ 40 ಡಿಗ್ರಿ ಸೆಲ್ಸಿಯಸ್ ವರೆಗೆ ಇದ್ದ ಬಿಸಿಲಿನ ತಾಪದಿಂದ ಜನರು ಹೈರಾಣಾಗಿದ್ದರು. ಮನೆ-ಕಚೇರಿಗಳಲ್ಲಿ ಹಗಲು-ರಾತ್ರಿ ಫ್ಯಾನ್, ಏರ್ ಕೂಲರ್ ಬಳಕೆ ಅನಿವಾರ್ಯವಾಗಿತ್ತು.

ಭಾನುವಾರ ಸಂಜೆ ಹೊತ್ತಿಗೆ ವರುಣದೇವ ಇಳೆಗೆ ಜಾರುತ್ತಿದ್ದಂತೆ ಅನೇಕರು ಮನೆಯಿಂದ ಹೊರಗೆ ಬಂದು ಮೊದಲ ಮಳೆಯ ಆನಂದ ಅನುಭವಿಸಿದರು. ಯುವಕರು ಮಳೆಯ ಸೆಲ್ಫಿ ಫೋಟೋ, ವೀಡಿಯೋ ಮಾಡುತ್ತಿದ್ದರು.

ದಿಢೀರ್ ಮಳೆಯ ಸಿಂಚನ ಆಗುತ್ತಿದ್ದಂತೆ ಪಾದಚಾರಿಗಳು, ವಾಹನ ಸವಾರರು ಮರ, ಅಂಗಡಿ ಮುಂಗಟ್ಟುಗಳ ಬಳಿ ಆಶ್ರಯ ಪಡೆದರು. ಗಾಳಿಯ ರಭಸಕ್ಕೆ ಅಲ್ಲಲ್ಲಿ ಮರದ ಕೊಂಬೆಗಳು ಮುಂದು ಬಿದ್ದಿವೆ. 2 ಗಂಟೆಗೂ ಹೆಚ್ಚು ಕಾಲ ಜಿಲ್ಲಾ ಕೇಂದ್ರದಲ್ಲಿ ವಿದ್ಯುತ್ಪ್ರತ್ಯಯವಾಗಿತ್ತು. ದಾವಣಗೆರೆ ಹಾಗೂ ಸುತ್ತಮುತ್ತ ಭಾರೀ ಗುಡುಗು-ಸಿಡಿಲಿನೊಂದಿಗೆ ಭೂಮಿ ಅದುರಿ ಹೋಗುವಂತೆ ಮಳೆ ಭೋರ್ಗರೆಯಿತು. ಅರ್ಧ ಗಂಟೆಗೂ ಹೆಚ್ಚು ಕಾಲ ನಿರಂತರವಾಗಿ ಸುರಿದ ಅಶ್ವಿನಿ ಮಳೆಯ ರಭಸಕ್ಕೆ ಮರಗಳು ತೂಗಾಡಿದವು. ಸಿಮೆಂಟ್ರಸ್ತೆಗಳಲ್ಲಿ ಮಳೆ ನೀರು ಪ್ರವಾಹದೋಪಾದಿಯಲ್ಲಿ ಹರಿಯಿತು. ಜಿಲ್ಲೆಯ ವಿವಿಧಡೆಗಳಲ್ಲಿ ಬಿರುಗಾಳಿ ಸಹಿತ ಗುಡುಗು, ಸಿಡಿಲಿನ ಆರ್ಭಟದೊಂದಿಗೆ ಮಳೆ ಸುರಿದ ಬಗ್ಗೆ ವರದಿಯಾಗಿದೆ.

ಪ್ರತಿನಿತ್ಯ ರಾತ್ರೋರಾತ್ರಿ ಮರಳು ಲೂಟಿ | ಕಾರ್ಯಾಚರಣೆಗೆ ಮೊದಲೇ ಲಾರಿಗಳು ಪರಾರಿ

ಅಕ್ರಮ ಮರಳುಗಾರಿಕೆ ಅಧಿಕಾರಿಗಳಿಗೆ ತಲೆನೋವು

▸ ಸತ್ಯನಾರಾಯಣ ತುಂಬಳ್ಳಿ

◆ **ಶಿವಮೊಗ್ಗ :** ನದಿಗಳಲ್ಲಿ ನೀರು ಕಡಿಮೆಯಾಗುತ್ತಿದ್ದಂತೆ ಅಕ್ರಮ ಮರಳುಗಾರಿಕೆಯೂ ಮಿತಿ ಮೀರುತ್ತಿದೆ. ಪ್ರತಿನಿತ್ಯವೂ ತುಂಗಾ, ಭದ್ರಾ, ಶರಾವತಿ ಹಾಗೂ ಇತರೆ ಸಣ್ಣಪುಟ್ಟ ನದಿಗಳಿಂದಲೂ ಅಕ್ರಮ ಮರಳು ಸಾಗಣೆ ಅಧಿಕಾರಿಗಳಿಗೆ ತಲೆನೋವಾಗಿ ಪರಿಣಮಿಸುತ್ತಿದೆ.

ಪ್ರತಿನಿತ್ಯವೂ ಜೆಸಿಬಿ, ಹಿಟಾಚಿಗಳನ್ನು ಬಳಸಿ ರಾತ್ರೋರಾತ್ರಿ ಮರಳು ತೆಗೆಯುತ್ತಿದ್ದು, ಬೆಳಗಾಗುವಷ್ಟರಲ್ಲಿ ಎಲ್ಲಿಗೆ ತಲುಪಬೇಕೋ ಅಲ್ಲಿಗೆ ಮರಳು ಹೋಗುತ್ತಿದೆ. ಅಧಿಕಾರಿಗಳು ಕಾರ್ಯಾಚರಣೆಗೆ ಹೊರಡುವಷ್ಟರಲ್ಲಿ ಲಾರಿಗಳು ಅನ್‌ಲೋಡ್ ಆಗಿರುತ್ತವೆ. ಕೆಲವೊಂದು ಸ್ಥಳಗಳಿಗೆ ಮರಳು ತಲುಪಿದ ನಂತರ ಅದರ ಮೇಲೆ ದಾಳಿ ನಡೆಸಲು ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ.

ಮಳೆ ಬಂದು ನದಿಯಲ್ಲಿ ಒಳ ಹರಿವು ಹೆಚ್ಚಾಗುವುದರೊಳಗೆ ಮರಳು ಸಂಗ್ರಹ ಮಾಡಿಕೊಳ್ಳಲು ನಿರಂತರ ಯತ್ನ ನಡೆಯುತ್ತಿದೆ. ನಗರ ಪ್ರದೇಶದ ಖಾಲಿ ನಿವೇಶನಗಳಲ್ಲಿ ಮರಳು ದಾಸ್ತಾನಾಗುತ್ತಿದೆ. ಯಾವೊದೋ ಖಾಲಿ ನಿವೇಶನ ಅಥವಾ ಅರೆಬರೆ ಕಟ್ಟಡವನ್ನು ತೋರಿಸಿ ಮರಳು ದಾಸ್ತಾನು ಮಾಡಿಕೊಳ್ಳಲಾಗುತ್ತಿದೆ. ಹೀಗೆ ದಾಸ್ತಾನು ಮಾಡಿಕೊಂಡ ಮರಳನ್ನು ಮಳೆಗಾಲದಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸಟ್ಟಾ ವ್ಯಾಪಾರಕ್ಕೆ ಯತ್ನ ನಡೆಸಲಾಗುತ್ತಿದೆ.

ಪರವಾನಿಗೆ ಪಡೆದು ನಡೆಸುತ್ತಿರುವ ಮರಳು ಕ್ವಾರೆ ಪಕ್ಕದಲ್ಲಿಯೇ ಅಕ್ರಮವಾಗಿ ಮರಳು ತೆಗೆದು ರಾಯಲ್ಟಿ ವಂಚಿಸಲಾಗುತ್ತಿದೆ. ಅಧಿಕೃತ ಕ್ವಾರಿಗಳಲ್ಲಿ ನಿಧಾನವಾಗಿ ಮರಳು ತೆಗೆದರೆ, ಅನಧಿಕೃತ ಕ್ವಾರೆಗಳಲ್ಲಿ ಜೆಸಿಬಿ ಮೊರೆತ ಹೆಚ್ಚಾಗುತ್ತಿದೆ.

ತೀರ್ಥಹಳ್ಳಿ ತಾಲೂಕಿಗಿಂತ ಶಿವಮೊಗ್ಗ ಹಾಗೂ ಭದ್ರಾವತಿ ತಾಲೂಕು ವ್ಯಾಪ್ತಿಯಲ್ಲಿಯೇ ತುಂಗಾ, ಭದ್ರ ನದಿಗಳಲ್ಲಿ ಅಕ್ರಮ ಮರಳುಗಾರಿಗೆ ಹೆಚ್ಚಾಗುತ್ತಿದೆ. ಹಾಡೋನಹಳ್ಳಿ, ಮಂಗೋಟೆ, ಹೊಳಲೂರು, ಚೀಲೂರು ಭಾಗಗಳಲ್ಲಿ ಅವ್ಯಾಹತವಾಗಿ ಅಕ್ರಮ ಮರಳು ತೆಗೆದು ನಗರ ಪ್ರದೇಶಕ್ಕೆ ಕಳಿಸಲಾಗುತ್ತಿದೆ. ಈ ಭಾಗದಲ್ಲಿ ಜಮೀನಿನ ಮೂಲಕ ನದಿಗೆ ತೆರಳಲು ಮಣ್ಣಿನ ರಸ್ತೆ ಮಾಡಿಕೊಳ್ಳಲಾಗಿದೆ.

ಗಣಿ ಮತ್ತು ಭೂಗರ್ಭ ಇಲಾಖೆ ಕಂದಾಯ, ಪಿಡಬ್ಲ್ಯೂಡಿ, ಅರಣ್ಯ, ಪೊಲೀಸ್ ಇಲಾಖೆಗಳು ವಾರ ಅಥವಾ 15 ದಿನಗಳಿಗೊಮ್ಮೆ ದಾಳಿಗೆ ತೆರಳಿದರೆ ಅಕ್ರಮ ಮರಳುಗಾರಿಕೆ ಮಾಡುವವರು ಸುಲಭವಾಗಿ ಚಳ್ಳೆ ಹಣ್ಣು ತಿನ್ನಿಸುತ್ತಿದ್ದಾರೆ. ಕೆಲವೊಮ್ಮೆ ದಾಳಿಗೆ ತೆರಳುವ ಮುನ್ನವೇ ದಂಧೆಕೋರರಿಗೆ ಮಾಹಿತಿ ಹೋಗಿ ಜೆಸಿಸಿ, ಟ್ರ್ಯಾಕ್ಟರ್‌ಗಳು ದಡ ಹತ್ತಿರುತ್ತವೆ. ಇಂತಹ ಸಂದರ್ಭದಲ್ಲಿ ಏನೂ ಮಾಡಲು ಸಾಧ್ಯವಾಗದ ಸ್ಥಿತಿ ಅಧಿಕಾರಿಗಳದ್ದಾಗಿದೆ.

ಕಳೆದ ತಿಂಗಳು ಭದ್ರಾ ನದಿಯಲ್ಲಿನ ಅಕ್ರಮ ಮರಳುಗಾರಿಕೆ ತಡೆಯಲು ಹೋದ ಮಹಿಳಾ ಅಧಿಕಾರಿಗೆ ಏಕವಚನದಲ್ಲಿ ಧಮಕಿ ಹಾಕಿದ್ದು, ಇದು ಇಡೀ ರಾಜ್ಯದಲ್ಲಿ ಸಂಚಲನ ಮೂಡಿಸಿತ್ತು. ಆ ಪ್ರಕರಣದಲ್ಲಿ ಪ್ರಭಾವಿಗಳು ತಪ್ಪಿಸಿಕೊಂಡಿದ್ದರು. ಆದರೆ ಕೆಲವರ ಮೇಲೆ ನೆಪ ಮಾತ್ರಕ್ಕೆ ಕೇಸು ದಾಖಲಿಸಲಾಗಿತ್ತು. ಆ ಪ್ರಕರಣದ ನಂತರ ಅಕ್ರಮ ಮರಳುಗಾರಿಕೆ ಸ್ವಲ್ಪ ಕಡಿಮೆಯಾಗಿತ್ತಾದರೂ ಕಳೆದ ಎರಡು ವಾರಗಳಿಂದ ಪುನಃ ಮುನ್ನೆಲೆಗೆ ಬಂದಿದೆ.

3.60 ಲಕ್ಷ ರೂ. ದಂಡ

ಅಕ್ರಮ ಮರಳುಗಾರಿಕೆ ಹಾಗೂ ಸಾಗಾಣಿಕೆಯ ಜಾಡು ಹಿಡಿದ ಉಪವಿಭಾಗಾಽಕಾರಿ ಸತ್ಯನಾರಾಯಣ ನೇತೃತ್ವದ ತಂಡ ಭಾನುವಾರ ಬೆಳಗಿನಜಾವ ಹಾಡೋನಹಳ್ಳಿ, ಮಂಗೋಟೆ ಭಾಗದಲ್ಲಿ ದಾಳಿ ನಡೆಸಿದೆ. ಈ ಸಂದರ್ಭದಲ್ಲಿ 8 ಟ್ರ್ಯಾಕ್ಟರ್ ಮತ್ತು 4 ಜೆಸಿಬಿ ಮೇಲೆ ವಶಕ್ಕೆ ಪಡೆಯಲಾಗಿದೆ. 3.60 ಲಕ್ಷ ರೂ. ದಂಡ ವಿಽಸಲಾಗಿದೆ. ಪ್ರಮುಖ ರಸ್ತೆಗಳನ್ನು ಲಾಕ್ ಮಾಡಿಕೊಂಡು ಮರಳು ತುಂಬಿಕೊಂಡು ಬರುವ ಲಾರಿ, ಟ್ರ್ಯಾಕ್ಟರ್‌ಗಳಿಗಾಗಿ ಕಾಯಲಾಯಿತಾದರೂ ಮಾಹಿತಿ ತಿಳಿದ ದಂಧೆಕೋರರು ಅನ್‌ಲೋಡ್ ಮಾಡಿ ಪರಾರಿಯಾಗಿದ್ದಾರೆ.

> **ಕಳೆದವಾರ ಮಂಗೋಟೆ ಭಾಗದಲ್ಲಿ ದಾಳಿ ನಡೆಸಿ 2 ಲಾರಿ, 2 ಜೆಸಿಬಿಗಳನ್ನು ವಶಕ್ಕೆ ಪಡೆದು ಅಕ್ರಮ ಮರಳು ಅಮಾನತು ಮಾಡಿಕೊಳ್ಳಲಾಗಿತ್ತು. ಭಾನುವಾರವೂ ಕೂಡ ದಾಳಿ ನಡೆಸಿ 8 ಟ್ರ್ಯಾಕ್ಟರ್, 4 ಜೆಸಿಬಿ ವಶಕ್ಕೆ ಪಡೆಯಲಾಗಿದೆ. ಸಿಬ್ಬಂದಿ ಕೊರತೆಯಿಂದಾಗಿ ಎಲ್ಲಾ ಕಡೆ ದಾಳಿ ನಡೆಸಲು ಸಾಧ್ಯವಾಗುತ್ತಿಲ್ಲ. ಕೆಲವೊಮ್ಮೆ ದಾಳಿಯ ಸುಳಿವು ಪಡೆದು ಕಳ್ಳರು ತಪ್ಪಿಸಿಕೊಳ್ಳುತ್ತಿದ್ದಾರೆ.**
>
> ■ ಸತ್ಯನಾರಾಯಣ,
> ಉಪ ವಿಭಾಗಾಧಿಕಾರಿ

ಇಂದಿನಿಂದ ರಾಜ್ಯಾದ್ಯಂತ ಲಸಿಕೆ ಅಭಿಯಾನ

◆ **ಶಿವಮೊಗ್ಗ :** ಕಾಲು ಬಾಯಿ ರೋಗ ಹಾಗೂ ಚರ್ಮ ಗಂಟು ರೋಗಕ್ಕೆ ಒಳಗಾಗುವ ಎಲ್ಲಾ ಜಾನುವಾರುಗಳಿಗೆ ಉಚಿತವಾಗಿ ಲಸಿಕೆ ಹಾಕಲಾಗುತ್ತಿದ್ದು, ಪಶುವೈದ್ಯಕೀಯ ಇಲಾಖೆಯ ಸಿಬ್ಬಂದಿಗಳು ನಿಮ್ಮ ಗ್ರಾಮಕ್ಕೆ ಬಂದಾಗ ಅವರೊಂದಿಗೆ ಸಹಕರಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಹೇಳಿದರು. ಜಿಲ್ಲೆಯಲ್ಲಿ ಜಾನುವಾರುಗಳಿಗೆ ಕಾಲು ಬಾಯಿ ಹಾಗೂ ಚರ್ಮ ಗಂಟು ರೋಗದ ವಿರುದ್ಧ ಲಸಿಕೆ ಅಭಿಯಾನಕ್ಕೆ ಕುಬಟೂರಿನಲ್ಲಿ ಭಾನುವಾರ ಚಾಲನೆ ನೀಡಿ ಮಾತನಾಡಿ, ಏ.21 ರಿಂದ ಜೂನ್ 4 ರವರೆಗೆ ರಾಜ್ಯಾದ್ಯಂತ 45 ದಿನಗಳ ಕಾಲ ಲಸಿಕೆ ಅಭಿಯಾನ ನಡೆಯಲಿದೆ ಎಂದರು. ಜಾನುವಾರುಗಳಿಗೆ ಲಸಿಕೆ ಹಾಕಿಸಿಕೊಂಡು ಈ ರೋಗಗಳಿಂದ ಗೋವುಗಳನ್ನು ರಕ್ಷಿಸಿ ಗೋವುಗಳ ಸಂರಕ್ಷಣೆಗೆ ಸರ್ಕಾರ ಸದಾ ಬದ್ಧವಾಗಿದೆ. ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಜಿಲ್ಲೆಯಲ್ಲಿ ಸುಮಾರು 5 ಲಕ್ಷ ಜಾನುವಾರುಗಳಿಗೆ ಲಸಿಕೆ ಹಾಕುವ ಗುರಿ ಹೊಂದಿದೆ. ಜಾನುವಾರು ಪಾಲಕರು ಇದರ ಪ್ರಯೋಜನ ಪಡೆಯುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಪಶುಪಾಲನ ಇಲಾಖೆಯ ಉಪ ನಿರ್ದೇಶಕ ಡಾ.ಬಾಬುರತ್ನ ಎ., ಮುಖ್ಯ ಪಶುವೈದ್ಯಾಧಿಕಾರಿ ಡಾ.ವಿನಯಕುಮಾರ ವೈ. ಎಲ್, ಮುಖ್ಯ ಪಶುವೈದ್ಯಾಧಿಕಾರಿ ಡಾ.ಪ್ರದೀಪ ಕುಮಾರ ಇತರರು ಉಪಸ್ಥಿತರಿದ್ದರು.

ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲು ಪ್ರತಿಭಟನೆ

ಜನಿವಾರ ಕತ್ತರಿಸಿದ ಪೊಲೀಸ್ ಅಧಿಕಾರಿ!

◆ **ಸಾಗರ :** ತಾಲ್ಲೂಕಿನ ಹಳೆ ಇಕ್ಕೇರಿಯ ಪಾರ್ಥ ಎಸ್. ರಾವ್ ಅವರ ಜನಿವಾರ ಬಿಚ್ಚಿಸಿ ಪರೀಕ್ಷೆಗೆ ಕಳಿಸಿದ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಬೀದರ್ ಮತ್ತು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಜನಿವಾರ ಕಿತ್ತು ಹಾಕಿದ ಘಟನೆ ಚರ್ಚೆಯಾಗುತ್ತಿರುವ ಬೆನ್ನಲ್ಲಿಯೇ ಸಾಗರದಲ್ಲಿಯೂ ಅಂತಹದ್ದೆ ಘಟನೆ ನಡೆದಿರುವುದು ಅನೇಕ ಪ್ರಶ್ನೆಗಳನ್ನು ಹುಟ್ಟು ಹಾಕುತ್ತಿದೆ.

ಪಾರ್ಥ ಎಸ್.ರಾವ್ ಅವರು ಏ.16ರಂದು ಸಿಇಟಿ ಪರೀಕ್ಷೆ ಬರೆಯಲು ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಹೋಗಿದ್ದಾಗ ಮುಂಭಾಗದ ಗೇಟ್‌ನಲ್ಲಿ ನಿಂತಿದ್ದ ಪೊಲೀಸರು ವಿದ್ಯಾರ್ಥಿಗಳನ್ನು ತಪಾಸಣೆ ಮಾಡಿದ್ದಾರೆ. ಆಗ ಪಾರ್ಥ ಎಸ್. ರಾವ್ ಅವರು ಜನಿವಾರ ಧರಿಸಿದ್ದು ಪತ್ತೆಯಾಗಿದೆ. ಆಗ ಪೊಲೀಸ್ ಅಧಿಕಾರಿ ಶರ್ಟ್ ಬಿಚ್ಚಿಸಿ, ಕತ್ತರಿಯಿಂದ ಜನಿವಾರವನ್ನು ಕತ್ತರಿಸಿ ಪರೀಕ್ಷೆಗೆ ಕಳಿಸಿದ್ದಾರೆ. ಇದರಿಂದ ಬ್ರಾಹ್ಮಣರ ಧಾರ್ಮಿಕ, ಆಧ್ಯಾತ್ಮ, ಭಾವನಾತ್ಮಕ ಭಾವನೆಗಳಿಗೆ ದಕ್ಕೆ ಉಂಟಾಗಿದೆ ಎಂದು ನಗರ ಠಾಣೆಗೆ ಪಾರ್ಥ ಎಸ್. ರಾವ್ ದೂರು ನೀಡಿದ್ದಾರೆ.

ಪ್ರತಿಭಟನೆ : ಪಾರ್ಥ ಎಸ್. ರಾವ್ ಅವರ ಜನಿವಾರ ಕತ್ತರಿಸಿರುವ ಕ್ರಮವನ್ನು ಖಂಡಿಸಿ ಶನಿವಾರ ತಾಲ್ಲೂಕು ಬ್ರಾಹ್ಮಣ ಮಹಾಸಭಾ ವತಿಯಿಂದ ನಗರ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಯು.ಎಚ್.ರಾಮಪ್ಪ, ಸರ್ಕಾರಿ ಅಧಿಕಾರಿಗಳ ದುರಂಹಕಾರವೇ ಇಂತಹ ಘಟನೆ ನಡೆಯಲು ಕಾರಣವಾಗಿದೆ. ಈ ಘಟನೆಗೆ ಕಾರಣವಾಗಿರುವ ಅಧಿಕಾರಿಗಳನ್ನು ತಕ್ಷಣ ಅಮಾನತ್ತು ಮಾಡಬೇಕು ಎಂದು ಒತ್ತಾಯಿಸಿದರೆ, ಚೂಡಾಮಣಿ ರಾಮಚಂದ್ರ ಮಾತನಾಡಿ, ವಿಪ್ರ ಸಮಾಜದ ಮೇಲೆ ಪದೇಪದೇ ನಡೆಯುತ್ತಿರುವ ದೌರ್ಜನ್ಯ ಖಂಡನೀಯ. ಸರ್ಕಾರ ಇದರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು ಎಂದರು.

ಜಿಪಂ ಮಾಜಿ ಸದಸ್ಯ ಬಿ.ಆರ್. ಜಯಂತ್ ಮಾತನಾಡಿ, ಪ್ರತಿಯೊಂದು ಸಮಾಜಕ್ಕೂ ಅದರದ್ದೆ ಆದ ಸಂಪ್ರದಾಯ ಇರುತ್ತದೆ. ಬ್ರಾಹ್ಮಣ ಸಮಾಜದಲ್ಲಿ ಜನಿವಾರ ಧರಿಸುವುದು ಸಂಪ್ರದಾಯವಾಗಿದೆ. ವಿದ್ಯಾರ್ಥಿ ಧರಿಸಿದ ಜನಿವಾರ ತೆಗೆಸುವುದು, ತುಂಡರಿಸುವುದು ಮನುಷ್ಯತ್ವವೇ ಅಲ್ಲ, ಬೀದರ್, ತೀರ್ಥಹಳ್ಳಿ, ಸಾಗರದಲ್ಲಿ ಅಲ್ಲದೇ ರಾಜ್ಯದ ಬೇರೆಬೇರೆ ಭಾಗದಲ್ಲಿ ಜನಿವಾರ ತೆಗೆಸಿದ್ದಾರೆ. ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು. ಸಮಾಜದ ಪ್ರಮುಖರಾದ ಅ.ಪು.ನಾರಾಯಣಪ್ಪ, ಪ್ರಸನ್ನ ಕೆರೆಕೈ, ಮಾ.ಸ.ನಂಜುಂಡಸ್ವಾಮಿ, ಗಣೇಶ್ ಪ್ರಸಾದ್, ಎಲ್.ಟಿ.ತಿಮ್ಮಪ್ಪ, ರವೀಶ್ ಮಾತನಾಡಿದರು. ಪ್ರತಿ ಭಟನೆಯಲ್ಲಿ ಕೆ.ಸಿ.ದೇವಪ್ಪ, ಐ.ವಿ.ಹೆಗಡೆ, ನಾರಾ ಯಣಮೂರ್ತಿ, ವಿನಾಯಕ ಜೋಯ್ಸ್, ಬದರಿನಾಥ್, ರಮೇಶ್ ಹಾರೆಗೊಪ್ಪ, ವ.ಶಂ.ರಾಮಚಂದ್ರ ಭಟ್, ರಾಜೇಂದ್ರ ಖಂಡಿಕಾ, ಶ್ರೀಕರ ಪಾಲ್ಗೊಂಡಿದ್ದರು.

ರಾಘವೇಶ್ವರ ಶ್ರೀಗಳ ಖಂಡನೆ

ಘಟನೆ ಕುರಿತು ಮಾಧ್ಯಮಕ್ಕೆ ಪ್ರತಿಕ್ರಿಯೆ ನೀಡಿರುವ ಹೊಸನಗರ ರಾಮಚಂದ್ರಪುರ ಮಠದ ಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು, ಬೀದರ್‌ನಲ್ಲಿ ಜನಿವಾರದ ಕಾರಣಕ್ಕೆ ವಿದ್ಯಾರ್ಥಿಗೆ ಪರೀಕ್ಷೆ ಬರೆಯಲು ಅವಕಾಶ ಕೊಡಲಿಲ್ಲ. ಶಿವಮೊಗ್ಗದಲ್ಲಿ ವಿದ್ಯಾರ್ಥಿ ಜನಿವಾರ ತುಂಡರಿಸಿದ ಘಟನೆ ನಡೆದಿದ್ದು ತುಂಬ ಬೇಸರವಾಗುತ್ತಿದೆ. ವಸ್ತ್ರದ ಒಳಗಿರುವ ಜನಿವಾರದಿಂದ ಯಾವ ತೊಂದರೆಯಾಗುತ್ತದೆ. ಇದೊಂದು ರೀತಿಯಲ್ಲಿ ಜಾತಿದ್ವೇಷ ಬಿತ್ತುವ, ಜಾತಿಯನ್ನು ಸಂಪೂರ್ಣವಾಗಿ ಹತ್ತಿಕ್ಕುವ ಕೆಲಸ ಮಾಡಲಾಗಿದೆ. ಪರೀಕ್ಷೆಯಂತಹ ಸೂಕ್ಷ್ಮ ಸಂದರ್ಭದಲ್ಲಿ ಜನಿವಾರ ಕಿತ್ತರೆ ವಿದ್ಯಾರ್ಥಿ ಮಾನಸಿಕ ಆಘಾತಕ್ಕೆ ಒಳಗಾಗುತ್ತಾನೆ ಎನ್ನುವ ಕನಿಷ್ಟ ಜ್ಞಾನ ಅಧಿಕಾರಿಗಳಿಗೆ ಇಲ್ಲವಾಗಿದೆ. ಬ್ರಾಹ್ಮಣರು ಮಾತ್ರವಲ್ಲದೆ ಅನೇಕ ಜಾತಿಯವರು ಜನಿವಾರ ಧರಿಸುತ್ತಾರೆ. ಲಿಂಗಾಯಿತರು ಲಿಂಗವನ್ನು ಧರಿಸುತ್ತಾರೆ. ಮುಂದೆ ಎಲ್ಲರಿಗೂ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಕೆಲಸವಾಗಬಹುದು. ಎಲ್ಲರೂ ಒಟ್ಟಾಗಿ ಇಂತಹ ಘಟನೆಯನ್ನು ಖಂಡಿಸಬೇಕು ಎಂದು ತಿಳಿಸಿದ್ದಾರೆ.

ಮಾನ್ಯ 1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು
ಕ್ರಿಮಿನಲ್ ಮಿಸ್.ನಂ. 551/2025
ಇದರ ನಡುವೆ: 1. ಬಿ. ಹಾಲರೆಡ್ಡಿ, ಬಿನ್. ಬಸಪ್ಪ ರೆಡ್ಡಿ, ವಯಸ್ಸು 69 ವರ್ಷ, ನಂ.35, 1ನೇ ಅಡ್ಡರಸ್ತೆ, ರಾಮಮೂರ್ತಿನಗರ, ಚಿನ್ನಸಂದ್ರ, ಕಾಡುಗೋಡಿ ಪ್ಲಾಂಟೇಶನ್, ಕಾಡುಗೋಡಿ, ಬೆಂಗಳೂರು -560067. 2. ಬಿ. ವಿಶ್ವಪ್ರಸಾದ್, ಬಿನ್ .ಬಸಪ್ಪ ರೆಡ್ಡಿ, ವಯಸ್ಸು 59 ವರ್ಷ, ವಾಸ: ಗಣಪತಿ ಪ್ರಸಾದ್ ನಿಲಯ, ರಾಮಮೂರ್ತಿನಗರ, ಶಿವಪುರೆಡ್ಡಿ ಬಡಾವಣೆ, ಕೆ. ಚಿನ್ನಸಂದ್ರ, ಕಾಡುಗೋಡಿ, ಬೆಂಗಳೂರು -560067 ...ಅರ್ಜಿದಾರರು
ಮತ್ತು: 1) ಮಾನ್ಯ ಆಯುಕ್ತರು, ಜನನ ಮತ್ತು ಮರಣ ನೋಂದಣಾಧಿಕಾರಿ, ಬಿ.ಬಿ.ಎಂ.ಪಿ, ಬೆಂಗಳೂರು. 2) ಮಾನ್ಯ ತಹಸೀಲ್ದಾರ್, ಜನನ ಮತ್ತು ಮರಣ ನೋಂದಣಾಧಿಕಾರಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ...ಎದುರುದಾರರು
ಸಾರ್ವಜನಿಕ ಪ್ರಕಟಣೆ
ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಮೇಲ್ಕಂಡ 1ನೇ ಮತ್ತು 2ನೇ ಅರ್ಜಿದಾರರ 1. ತಂದೆಯವರಾದ ದಿವಂಗತ ಶ್ರೀ. ಬಸಪ್ಪ ರೆಡ್ಡಿ, ಬಿನ್. ಲೇಟ್ ಮುನ್ನಾಯಿ ರೆಡ್ಡಿ @ ಮುನ್ನಾಯಿ ರವರು ದಿನಾಂಕ: 22.02.2002 ರಂದು ಗಣಪತಿ ಪ್ರಸಾದ್ ನಿಲಯ, ರಾಮಮೂರ್ತಿ ನಗರ, ಶಿವಪುರೆಡ್ಡಿ ಬಡಾವಣೆ, ಕೆ.ಚನ್ನಸಂದ್ರ, ಕ